ಅಸಲು ದಾವಾ ಸಂಖ್ಯೆ - 288/2015
ಡಿಡಬ್ಲ್ಯೂ - 01
ದಿನಾಂಕಃ 28-01-2019
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು - ಶ್ರೀಃ ಎನ್ ಎಸ್ ಪಿ ವಾದಿಪರ ವಕೀಲರಿಂದ.

ಸರ್ವೆ ನಂ.63/8 ರಲ್ಲಿರುವ 3 ಎಕರೆ 29 ಗುಂಟೆ ಜಮೀನು ಇರುತ್ತದೆ. ಈ ಜಮೀನಿನಲ್ಲಿ ವಾದಿಗೆ ಪಾಲನ್ನು ನೀಡಿದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಈ ಬಗ್ಗೆ ದಾಖಲೆಯು ನನ್ನ ಬಳಿ ಇರುವುದಿಲ್ಲ. ವಾದಿಗೆ ಪಾಲನ್ನು ಕೊಟ್ಟಿರುತ್ತೇವೆ ಆದರೆ ನೊಂದಣಿಯ ಮುಖಾಂತರ ಪಾಲನ್ನು ಕೊಟ್ಟಿರುವುದಿಲ್ಲ. ದಾವಾದ ಆಸ್ತಿಗಳು ಮೂಲತಃ ನಮ್ಮ ತಂದೆಯವರ ಆಸ್ತಿಗಳು ಇದ್ದವು ಅಂದರೆ ಸರಿ. ನಮ್ಮ ತಂದೆಯವರು 2013 ನೇ ಇಸ್ವಿಯಲ್ಲಿ ಮೃತ ಪಟ್ಟಿರುತ್ತಾರೆ ಅಂದರೆ ಸರಿ. ನಮ್ಮ ತಂದೆಯವರು ಮೃತ ಪಟ್ಟ ನಂತರ ದಾವಾದ ಆಸ್ತಿಗಳಲ್ಲಿ ನಮ್ಮ ನಡುವೆ ಹಾಗೂ ವಾದಿಯ ನಡುವೆ ಪಾಲು ವಿಭಾಗ ಆಗಿರುವುದಿಲ್ಲ ಅಂದರೆ ಸರಿ. ನಮ್ಮ ತಂದೆಯು ಮೃತ ಪಡುವಕ್ಕಿಂತ ಪೂರ್ವದಲ್ಲಿ ಪಾಲು ವಿಭಾಗ ಆಗಿರುತ್ತದೆ ಅಥವಾ ಇಲ್ಲ ಅಂದರೆ ಸಾಕ್ಷಿಯು ಪಾಲು ವಿಭಾಗ ಆಗಿತ್ತು ಎಂದು ನುಡಿಯುತ್ತಾರೆ . 1997 ನೇ ಇಸ್ವಿಯಲ್ಲಿ ಪಾಲು ವಿಭಾಗ ಆಗಿರುತ್ತದೆ. ಪಾಲು ವಿಭಾಗವು ನನ್ನ ನಡುವೆ, ನನ್ನ ತಂದೆ ತಾಯಿಯ ನಡುವೆ ಹಾಗೂ ಅಕ್ಕತಂಗಿಯರ ನಡುವೆ ಆಗಿರುತ್ತದೆ. ನಿಖರವಾಗಿ ಇದೇ ದಿನದಂದು ಪಾಲು ವಿಭಾಗ ಆಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಪಾಲು ವಿಭಾಗ ಪತ್ರವನ್ನು ಬರೆದಿರುವುದಿಲ್ಲ 1997 ನೇ ಇಸ್ವಿಯಲ್ಲಿ ಪಾಲು ವಿಭಾಗವು ನನ್ನ ನಡುವೆ, ನನ್ನ ತಂದೆ ತಾಯಿಯ ನಡುವೆ ಹಾಗೂ ಅಕ್ಕತಂಗಿಯರ ನಡುವೆ ಆಗದೇ ಇದ್ದರೂ ಕೂಡಾ ನಾನು ಆಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

2. ವಾದಿಯ ಮದುವೆಯು ಯಾವ ಊರಲ್ಲಿ ಆಗಿರುತ್ತದೆ ಅಂದರೆ ನನಗೆ ಗೊತ್ತಿರುವುದಿಲ್ಲ. ಕಾರಡಗಿ ಗ್ರಾಮದಲ್ಲಿ ಆಗಿರುವ ಬಗ್ಗೆ ನನಗೆ ನೆನಪಿರುವುದಿಲ್ಲ. 1996 ನೇ ಇಸ್ವಿಯಲ್ಲಿ ವಾದಿಯ ಮದುವೆ ಆಗಿರುತ್ತದೆ ಅಂದರೆ ಸಾಕ್ಷಿಯು 1995-96 ನೇ ಇಸ್ವಿಯಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ತಾಯಿ ಹಾಗೂ ತಂದೆಯ ನಡುವೆ ಮೊದಲು ತಂಟೆ ಇತ್ತು ಅಂದರೆ ಸರಿ ಸಾಕ್ಷಿ ಮುಂದುವರೆದು ನಂತರ ಇಬ್ಬರೂ ಸರಿಯಾಗಿದ್ದರು. ಸುಮಾರು 25-30 ವರ್ಷಗಳಿಂದ ನನ್ನ ತಾಯಿಯವರು ಕಳಲಕೊಂಡ ಗ್ರಾಮದಲ್ಲಿ ವಾಸ ಇದ್ದರೂ ಅಂದರೆ ಸರಿ. ಈಗಲೂ ಸಹ ನನ್ನ ತಾಯಿಯವರು ಕಳಲಗೊಂಡ ಗ್ರಾಮದಲ್ಲಿ ವಾಸವಿದ್ದಾರೆ ಅಂದರೆ ಸರಿ. ವಾದಿಯ ಮದುವೆಯನ್ನು ನಮ್ಮ ತಾಯಿಯವರು ಕಳಲಕೊಂಡ ಗ್ರಾಮದಲ್ಲಿ ಮಾಡಿರುತ್ತಾರೆ ಅಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಾವೆಲ್ಲರೂ ಕೂಡಿ ವಾದಿಯ ಮದುವೆಯನ್ನು ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ನಾವೆಲ್ಲರೂ ಕೂಡಿ ವಾದಿಯ ಮದುವೆಯನ್ನು ಮಾಡದೇ ಇದ್ದರೂ ಕೂಡಾ ಮಾಡಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

3. ವಾದಿಯ ಮದುವೆಯು ಆಗುವ ಸಮಯದಲ್ಲಿ ದಾವಾ ಆಸ್ತಿಗಳು ನನ್ನ ತಂದೆಯ ಹೆಸರಿನಲ್ಲಿ ಇದ್ದವು ಅಂದರೆ ಸರಿಯಲ್ಲ. 5 ನೇ ಪ್ರತಿವಾದಿಗೆ ದಾವಾ ಆಸ್ತಿ ಸರ್ವೆ ನಂ.63/8 ನ್ನು ಮಾರಾಟ ಮಾಡಿದ ವಿಷಯವನ್ನು ವಾದಿಗೆ ತಿಳಿಸಿರುತ್ತೇವೆ. 5 ನೇ ಪ್ರತಿವಾದಿಗೆ ಮಾರಾಟ ಮಾಡಿದ ಸಮಯದಲ್ಲಿ ವಾದಿಯ ಮದುವೆಯು ಆಗಿರಲಿಲ್ಲ. ಎಷ್ಟನೇ ವಿಷಯದಲ್ಲಿ ಮಾರಾಟ ಮಾಡಿದ ಬಗ್ಗೆ ನನಗೆ ನೆನಪಿರುವುದಿಲ್ಲ.

ದಿ:18-11-1997 ರಲ್ಲಿ 5 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇವೆ ಅಂದರೆ ಸರಿ. 5 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ ನಂತರ ವಾದಿಯ ಮದುವೆ ಆಗಿರುತ್ತದೆ. 5 ನೇ ಪ್ರತಿವಾದಿಗೆ ದಾವಾ ಆಸ್ತಿ ಸರ್ವೆ ನಂ.63/8 ನ್ನು ಮಾರಾಟ ಮಾಡುವುದಕ್ಕಿಂತ ಪೂರ್ವದಲ್ಲಿ ವಾದಿಯ ಮದುವೆಯು ಆಗಿತ್ತು ಅಂದರೆ ಸರಿಯಲ್ಲ.

4. ದಾವಾ ಆಸ್ತಿ ಸರ್ವೆ ನಂ.63/8 ನ್ನು ಮಾರಾಟ ಮಾಡುವಾಗ ಉಪನೊಂದಣಿ ಕಚೇರಿಯಲ್ಲಿ ನಾನು, ತಮ್ಮ, ತಾಯಿ ಹಾಗೂ ವಾದಿ ಕೂಡಿ ಹೊಗಿದ್ದೆವು. ಖರೀದಿ ಪತ್ರಕ್ಕೆ ವಾದಿಯು ಸಹಿ ಮಾಡಿರುವುದಿಲ್ಲ ವಾದಿಯನ್ನು ಉಪನೊಂದಣಿ ಕಚೇರಿಗೆ ಕರೆದುಕೊಂಡು ಹೋಗಿದ್ದೆವು ಆದರೆ ಖರೀದಿ ಪತ್ರಕ್ಕೆ ನಾವು ಸಹಿ ಮಾಡಿಸಿರುವುದಿಲ್ಲ. ನಿಡಿ-8 ಕ್ಕೆ ನಾನು, ಪ್ರತಿವಾದಿ ನಂ-2 ರಿಂದ 4 ನೇದ್ದರು ಮಾತ್ರ ಸಹಿ ಮಾಡಿರುತ್ತೇವೆ ಅಂದರೆ ಸರಿ. ನಾವು 4 ಜನರು ಕೂಡಿ 5 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇವೆ ಅಂದರೆ ಸರಿ. 5 ನೇ ಪ್ರತಿವಾದಿಗೆ ದಾವಾ ಆಸ್ತಿ ಸರ್ವೆ ನಂ.63/8 ನ್ನು ಮಾರಾಟ ಮಾಡುವಾಗ ನಮ್ಮ ತಂದೆಯವರು ಜೀವಂತ ಇದ್ದರೂ ಅಂದರೆ ಸರಿ. ನಿಡಿ-8 ಕ್ಕೆ ನಮ್ಮ ತಂದೆಯವರ ಸಹಿಯನ್ನು ಮಾಡಿಸಿರುವುದಿಲ್ಲ ಅಂದರೆ ಸರಿ. ನಿಡಿ-8 ನ್ನು ನಾವೇ ಹುಟ್ಟಿಸಿಕೊಂಡು 5 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇವೆ ಅಂದರೆ ಸರಿಯಲ್ಲ. ವಾದಿಗೆ ಪಾಲನ್ನು ನೀಡಲು ಆಗುತ್ತದೆ ಅನ್ನುವ ಉದ್ದೇಶದಿಂದ 5 ನೇ ಪ್ರತಿವಾದಿಗೆ ದಾವಾ ಆಸ್ತಿ ಸರ್ವೆ ನಂ.63/8 ನ್ನು ಮಾರಾಟ ಮಾಡಿರುತ್ತೇವೆ ಅಂದರೆ ಸರಿಯಲ್ಲ.

5. ಈ ಪ್ರಕರಣದಲ್ಲಿ ನನ್ನ ಪರವಾಗಿ ಯಾವ ಯಾವ ದಾಖಲೆಗಳನ್ನು ಹಾಜರುವಪಡಿಸುವ ಬಗ್ಗೆ ನನ್ನ ವಕೀಲರ ಮುಖಾಂತರ ತಿಳಿದುಕೊಂಡ ಬಗ್ಗೆ ನನಗೆ ನೆನಪಿರುವುದಿಲ್ಲ. ನಿಡಿ-2 ರ ಪ್ರಕಾರ ನಾವು ರಾಜೀ ಮಾಡಿಕೊಂಡಿರುತ್ತೇವೆ ಅಂದರೆ ಸರಿ. ನಿಡಿ-2 ರ ಪ್ರಕಾರ ಸರ್ವೆ ನಂ.7/5 ರಲ್ಲಿರುವ 23 ಗುಂಟೆ ಜಮೀನು ನನ್ನ ತಂದೆಯ ಪಾಲಿಗೆ ಬಂದಿತ್ತು ಅಂದರೆ ಸರಿ. ಸರ್ವೆ ನಂ.7/5 ಇವತ್ತಿಗೂ ನನ್ನ ತಂದೆ ಹೆಸರಿನಲ್ಲಿರುತ್ತದೆ ಅಂದರೆ ಸರಿ. ನಿಡಿ-2 ರ ಪ್ರಕಾರ ಸರ್ವೆ ನಂ.63/5 ರಲ್ಲಿರುವ 3 ಎಕರೆ 4 ಗುಂಟೆ ಹಾಗೂ ಸರ್ವೆ ನಂ.63/8 ರಲ್ಲಿರುವ 3 ಎಕರೆ 23 ಗುಂಟೆ ಜಮೀನುಗಳು ನನಗೆ ಹಾಗೂ ಪ್ರತಿವಾದಿ-2 ರಿಂದ 4 ರವರಿಗೆ ಜಂಟಿಯಾಗಿ ನಮ್ಮ ಪಾಲಿಗೆ ಬಂದಿರುತ್ತವೆ ಅಂದರೆ ಸರಿ. ನಿಡಿ-2 ರ ಪ್ರಕಾರ ವಾದಿಗೆ ಪಾಲನ್ನು ನೀಡಿರುವುದಿಲ್ಲ ಆದರೆ ದುಡ್ಡು ಕೊಟ್ಟಿರುತ್ತೇವೆ. ರೂ.25000/-ಗಳನ್ನು ವಾದಿಗೆ ಕೊಟ್ಟಿರುತ್ತೇವೆ. ನ್ಯಾಯಾಲಯದ ಸಮಕ್ಷಮ ರೂ.25000/-ಗಳನ್ನು ವಾದಿಗೆ ಕೊಟ್ಟಿರುವುದಿಲ್ಲ ಆದರೆ ನಮ್ಮ ಮನೆಯಲ್ಲಿ ಕೊಟ್ಟಿರುತ್ತೇವೆ. ನಿಡಿ-2 ರ ಪ್ರಕಾರ ರಾಜೀ ಆಗುವ ಸಮಯದಲ್ಲಿ ವಾದಿಯು ಅಲ್ಪವಯಿ ಇದ್ದಳು ಅಂದರೆ ಸರಿ. ರಾಜೀ ಆಗುವ ಸಮಯದಲ್ಲಿ ವಾದಿಯು ಅಲ್ಪವಯಿ ಇದ್ದಳು ಆದರೂ ಕೂಡಾ ನ್ಯಾಯಾಲಯದಿಂದ ಅನುಮತಿಯನ್ನು ಪಡೆದುಕೊಂಡಿರುವುದಿಲ್ಲ ಅಂದರೆ ಸಾಕ್ಷಿಯು ನನಗೆ ಮಾಹಿತಿ ಇರುವುದಿಲ್ಲ ಅದೇ ರೀತಿ ಪ್ರಮಾಣಪತ್ರವನ್ನು ಸಲ್ಲಿಸಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಚಾಪಾ ಕಾಗದವನ್ನು ನೀಡದ ಕಾರಣ ಡಿಕ್ರಿಯನ್ನು ತಯಾರಿಸಿರುವುದಿಲ್ಲ ಅಂದರೆ ಸರಿಯಲ್ಲ ಕೇವಲ ನಾನು ರಾಜೀ ಆದೇಶವನ್ನು ಮಾತ್ರ ಹಾಜರುಪಡಿಸಿರುತ್ತೇನೆ ಅಂದರೆ ಸರಿಯಲ್ಲ ನಿಡಿ-2 ರ ರಾಜೀಯ ಆದೇಶದ ಪ್ರಕಾರ ನಮ್ಮ ಹೆಸರುಗಳು ಪಹಣಿ ಪತ್ರಿಕೆಗಳಲ್ಲಿ ದಾಖಲು ಆಗಿರುತ್ತದೆ. ನಿಡಿ-2 ರ ಪ್ರಕಾರ ನಮ್ಮ ಹೆಸರುಗಳನ್ನು ಪಹಣಿ ಪತ್ರಿಕೆಗಳಲ್ಲಿ

ದಾಖಲಿಸಿಕೊಂಡಿರುವುದಿಲ್ಲ ಅಂದರೆ ಸರಿಯಲ್ಲ. ರಾಜೀ ಆಗುವ ಸಮಯದಲ್ಲಿ ವಾದಿಗೆ ರೂ.25000/-ಗಳನ್ನು ನಾವು ನೀಡಿರುವುದಿಲ್ಲ ಅಂದರೆ ಸರಿಯಲ್ಲ.

6. ಮನೆಯ ಆಸ್ತಿಗಳಿಗೆ ನನ್ನ ತಂದೆಯ ಹೆಸರನ್ನು ಕಡಿಮೆ ಮಾಡಿ ನನ್ನ ಹೆಂಡತಿಯ ಹೆಸರನ್ನು ದಾಖಲಿಸಿರುತ್ತೇನೆ ಅಂದರೆ ಸಾಕ್ಷಿಯು ನನ್ನ ತಂದೆಯವರು ಬಿಟ್ಟುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು 2010-11 ರಲ್ಲಿ ಮಾಡಿಸಿರುತ್ತೀರಿ ಅಂದರೆ ನಮ್ಮ ತಂದೆಯವರು ಮಾಡಿಸಿರುತ್ತಾರೆ. ಸದರಿ ಹಕ್ಕು ಬಿಟ್ಟು ಪತ್ರವನ್ನು ನೊಂದಣಿ ಮಾಡಿಸಿರುವುದಿಲ್ಲ ಅಂದರೆ ಸರಿಯಲ್ಲ ಮನೆಯ ಆಸ್ತಿಗಳಿಗೆ ನನ್ನ ಹೆಂಡತಿ ಹೆಸರು ದಾಖಲು ಆಗಿರುವ ಬಗ್ಗೆ ವಾದಿಗೆ ಗೊತ್ತಿರುವುದಿಲ್ಲ ಅಂದರೆ ಸರಿಯಲ್ಲ. ಮನೆಯ ಆಸ್ತಿಯನ್ನು ನನ್ನ ಹೆಂಡತಿ ಹೆಸರಿನಲ್ಲಿ ದಾಖಲಿಸುವ ಸಮಯದಲ್ಲಿ ವಾದಿಯ ಸಹಿಯನ್ನು ನಾವು ಪಡೆದುಕೊಂಡಿರುವುದಿಲ್ಲ ಅಂದರೆ ಸರಿ. ವಾದಿಗೆ ಗೊತ್ತಾಗದೇ ರೀತಿಯಲ್ಲಿ ದಾಖಲೆಗಳನ್ನು ಸೃಷ್ಟಿ ಮಾಡಿ ನಮ್ಮ ಹೆಸರುಗಳನ್ನು ದಾಖಲಿಸಿಕೊಂಡಿರುತ್ತೇವೆ ಅಂದರೆ ಸರಿಯಲ್ಲ. ನಿಡಿ-16 ನಮ್ಮ ಆಸ್ತಿ ಇರುವುದಿಲ್ಲ ಅಂದರೆ ಸರಿ. ನಿಡಿ-16 ರಲ್ಲಿರುವ ಆಸ್ತಿಯು ನನ್ನ ತಾಯಿಯ ತಂದೆಯ ಆಸ್ತಿಯು ಇರುತ್ತದೆ ಅಂದರೆ ಸರಿ. ನಿಡಿ-16 ರಲ್ಲಿರುವ ಜಮೀನು ನನ್ನ ತಾಯಿಯ ತಂದೆಯವರು ನನ್ನ ತಾಯಿಗೆ ಬಿಟ್ಟು ಕೊಟ್ಟಿದ್ದರೂ ಅಂದರೆ ಸರಿ. ನಿಡಿ-16 ರಲ್ಲಿರುವ ಜಮೀನನ್ನು ನನ್ನ ತಾಯಿಯವರು ಇವರ ಮೊಮ್ಮಗಳಾದ ಸಿಂಧೂ ಇವರಿಗೆ ದಾನಪತ್ರ ಮಾಡಿಕೊಟ್ಟಿರುತ್ತಾರೆ . ನಿಡಿ-16 ರಲ್ಲಿರುವ ಜಮೀನು ನಮ್ಮ ಮನೆತನದ ಆಸ್ತಿ ಇರುವುದಿಲ್ಲ ಅಂದರೆ ಸರಿ. ದಾವಾ ಆಸ್ತಿಗಳು ವಾದಿ ಹಾಗೂ ಪ್ರತಿವಾದಿಯರ ಸಾಮೂಹಿಕ ಆಸ್ತಿಗಳು ಇರುತ್ತವೆ ಅಂದರೆ ಸರಿಯಲ್ಲ. ದಾವಾದ ಆಸ್ತಿಗಳಲ್ಲಿ ವಾದಿಗೂ ಸಹ ಹಕ್ಕು ಇರುತ್ತದೆ ಅಂದರೆ ಸರಿಯಲ್ಲ. ವಾದಿಗೆ ಗೊತ್ತಾಗದೇ ರೀತಿಯಂತೆ ನಾನು ಸಾಕಷ್ಟು ಕಾಗದ ಪತ್ರಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಅಂದರೆ ಸರಿಯಲ್ಲ ನನ್ನ ತಂದೆಯವರು ಮೃತಪಟ್ಟಾಗ್ಗ ಅಂತ್ಯ ಸಂಸ್ಕಾರಕ್ಕೆ ವಾದಿಯು ಬಂದಿದ್ದಳು ಅಂದರೆ ಸರಿ. ಆವಾಗ ವಾದಿಯು ದಾವಾ ಆಸ್ತಿಗಳಲ್ಲಿ ಪಾಲು ವಿಭಾಗ ಕೊಡಿ ಎಂದು ನಮ್ಮನ್ನು ಕೇಳಿರುತ್ತಾಳೆ ಅಂದರೆ ಸರಿ. ಆ ಪ್ರಕಾರ ನಾವು ವಾದಿಗೆ ಪಾಲು ವಿಭಾಗವನ್ನು ನೀಡಿರುವುದಿಲ್ಲ ಅಂದರೆ ಸರಿಯಲ್ಲ. ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು.